ದಿನಾಂಕಃ **04.03.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಮಾನ್ಯ ಶ್ರೀ. MMP ರವರಿಂದಃ**

ನಾನು **2** ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ಮೊದಲು ಬೊಳಾರದಲ್ಲಿ ಇದ್ದು, ನಂತರ ಕೊಪ್ಪಕ್ಕೆ ಬಂದು ಸ್ವಂತ ಮನೆ ಕಟ್ಟಿಕೊಂಡು ಇರುತ್ತೇನೆ. ಕೊಪ್ಪ ಗ್ರಾಮಕ್ಕೆ ಹೊಸದಾಗಿ ಬಂದು ವಾಸವಾಗಿರುತ್ತೇನೆ ಎಂದರೆ ಸರಿ. ನನಗೆ ಕೊಪ್ಪದಲ್ಲಿ ಜಮೀನು ಇಲ್ಲ. ನಾನು ಮೊದಲು ಗುತ್ತಿಗೆ ಕೆಲಸ ಮಾಡುತ್ತಿದ್ದು, ಈಗ ಮರಳು, ಜಲ್ಲಿ ಸರಬರಾಜು ಮಾಡುತ್ತೇನೆ. ಗುತ್ತಿಗೆ ಕೆಲಸಕ್ಕೆ ಪರವಾನಗಿ ಪಡೆದಿರುತ್ತೇನೆ. ಈಗ **2** ವರ್ಷಗಳಿಂದ ನಾನು ಗುತ್ತಿಗೆ ಕೆಲಸ ಮಾಡುತ್ತಿಲ್ಲ. ಕಟ್ಟಡ, ನಾಲೆ, ರಸ್ತೆ ಎಲ್ಲಾ ತರಹದ ಗುತ್ತಿಗೆ ಕೆಲಸವನ್ನು ಮಾಡುತ್ತೇನೆ. ನನಗೆ ಗುತ್ತಿಗೆ ಕೆಲಸವನ್ನು ಹೊರತು ಪಡಿಸಿ ನನಗೆ ಬೇರೆ ಕೆಲಸ ಇಲ್ಲ ಎಂದರೆ ಸರಿಯಲ್ಲ. ನಾನು **25** ವರ್ಷಗಳಿಂದ ಗುತ್ತಿಗೆ ಕೆಲಸ ಬೊಳಾರದಲ್ಲಿ ಮಾಡುತ್ತಿದ್ದೇನು. ಕೊಪ್ಪಕ್ಕೆ ಬಂದು **10** ವರ್ಷಗಳಾಗಿರುತ್ತದೆ. ಕೊಪ್ಪ ಗ್ರಾಮದಲ್ಲಿ ನನಗೆ ಯಾರು ಸಂಬಂಧಿಕರು ಇರುವುದಿಲ್ಲ. ನನಗೆ ಗುತ್ತಿಗೆ ಪರವಾನಗಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಅಗುವುದಿಲ್ಲ, ಏಕೆಂದರೆ ನಾನು ಈಗ ಗುತ್ತಿಗೆ ಕೆಲಸವನ್ನು ಮಾಡುತ್ತಿಲ್ಲ. ಗುತ್ತಿಗೆ ಕೆಲಸದಿಂದ ವಾರ್ಷಿಕವಾಗಿ ಅಂದಾಜು **5-6** ಲಕ್ಷಗಳ ಸಂಪಾದನೆ ಇತ್ತು. ಈ ಬಗ್ಗೆ ಲೆಕ್ಕ ಪತ್ರ ಇಟ್ಟಿಲ್ಲ. ನಾನು ಗುತ್ತಿಗೆ ಕೆಲಸ ಆರಂಭ ಮಾಡಿದಾಗಿನಿಂದಲೂ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನು.

ನನಗೆ ಇಬ್ಬರು ಗಂಡು ಹಾಗೂ ಇಬ್ಬರು ಹೆಣ್ಣು ಮಕ್ಕಳು. ನನ್ನ ಮಕ್ಕಳೊಂದಿಗೆ ವಿಭಾಗ ಮಾಡಿಕೊಂಡಿದ್ದು, ಎಲ್ಲಾರು ಬೇರೆ ಬೇರೆ ಇದ್ದಾರೆ. ನಾನು ಈಗ ನನ್ನ ಹಿರಿಯ ಮಗನೊಂದಿಗೆ ಇದ್ದೇನೆ. ನನ್ನ ಹಿರಿಯ ಮಗ ನನ್ನನ್ನು ನೋಡಿಕೊಳ್ಳುತ್ತಿದ್ದಾನೆ ಎಂದರೆ ಸರಿ. ನನಗೆ **4** ಎಕರೆ ಜಮೀನು ಬೊಳಾರದಲ್ಲಿ ಇರುತ್ತದೆ. ಮನೆ ಬಾಡಿಗೆಗೆ ಕೊಟ್ಟಿದ್ದು ಅದರಿಂದ ತಿಂಗಳಿಗೆ **20** ಸಾವಿರ ರೂ.ಗಳ ಬಾಡಿಗೆ ಬರುತ್ತದೆ. ವ್ಯವಸಾಯದಿಂದ ಮತ್ತು ಗುತ್ತಿಗೆಯಿಂದ ಬಂದ ಹಣ ನಮ್ಮ ಜೀವನಕ್ಕೆ ಸಾಕಾಗುತ್ತಿದ್ದು, ಬೇರೆ ಏನು ಮಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ.

ನಾನು ಜಲ್ಲಿ, ದಿಂಡುಗಳನ್ನು ಸರಬರಾಜು ಮಾಡುವ ಬಗ್ಗೆ ದಾಖಲೆ ಇಲ್ಲ. ನಾನು ಏಜೆಂಟ್ ನಂತೆ ಕೆಲಸ ಮಾಡುತ್ತಿದ್ದು ಒಬ್ಬರಿಂದ ತೆಗೆದುಕೊಂಡು ಇನ್ನೊಬ್ಬರಿಗೆ ಕಳುಹಿಸುತ್ತೇನೆ. ನನ್ನ ಬಳಿ **2** ಟ್ರ್ಯಾಕ್ಟರ್ ಗಳು ಇರುತ್ತದೆ. ಸದರಿ ಟ್ರ್ಯಾಕ್ಟರ್ ನಲ್ಲಿ ಸರಬರಾಜು ಮಾಡುತ್ತೆನೆ. ಅದನ್ನು ನನ್ನ ಮಕ್ಕಳು ಈಗ ನೋಡಿಕೊಳ್ಳುತ್ತಾರೆ, ನಾನು ನೋಡಿಕೊಳ್ಳುತ್ತಿಲ್ಲ. ಸುಮಾರು **10-15** ವರ್ಷಗಳಿಂದ ಅದನ್ನು ನನ್ನ ಮಕ್ಕಳು ನೋಡಿಕೊಳ್ಳುತ್ತಿದ್ದಾರೆ. ನಾವು ವಿಭಾಗ ಮಾಡಿಕೊಂಡು **2-3** ವರ್ಷಗಳಾಗಿರುತ್ತದೆ.

ಹಣಕಾಸಿನ ವ್ಯವಹಾರವನ್ನು ಬ್ಯಾಂಕ್ ಮುಖಾಂತರ ಮಾಡಿರುವುದಿಲ್ಲ, ಹಣವನ್ನು ಮನೆಯಲ್ಲಿಯೇ ಇಟ್ಟುಕೊಂಡಿರುತ್ತೇವೆ. ನನಗೆ **25** ವರ್ಷಗಳಿಂದ ಬ್ಯಾಂಕ್ ಖಾತೆ ಇರುತ್ತದೆ. ಗುತ್ತಿಗೆಯಿಂದ ಬಂದ ಹಣವನ್ನು ಬ್ಯಾಂಕಿನಲ್ಲಿ ಜಮೆ ಮಾಡಿ ವಾಪಸ್ಸು ತೆಗೆಯುತ್ತಿದ್ದೇನು. **2019-20** ರಲ್ಲಿ ನಾನು ಆದಾಯ ತೆರಿಗೆ ಪಾವತಿ ಮಾಡಿರುತ್ತೇನೆ. ನಾವು ಏನೇನು ವ್ಯವಹಾರ ಮಾಡುತ್ತೇವೆ ಅದನ್ನು ರಿಟರ್ನ್ಸ್ ನಲ್ಲಿ ನಮೂದು ಮಾಡುತ್ತೇವೆ.

ನಾನು ಬೇರೆ ಯಾರಿಗೂ ಸಾಲ ನೀಡಿರುವುದಿಲ್ಲ. ಆರೋಪಿ ಕೆ ಎಂ ದೊಡ್ಡಿಯವರು. ಆರೋಪಿ ನನ್ನ ಸಂಬಂಧಿಕರಲ್ಲ. ಆರೋಪಿಯ ಗಂಡ ಹೊಸಗಾವಿ ಕರೀಗೌಡ ಅಗಿರುತ್ತಾರೆ. ನಮ್ಮ ಊರಿಗೂ ಆರೋಪಿಯ ಗಂಡನ ಊರಿಗೂ **2-3** ಕಿಮೀ ದೂರುವಿರುತ್ತದೆ. ನಾನು ಆರೋಪಿಯ ಗಂಡ ಸಂಬಂಧಿಕರಲ್ಲ. ನನಗೆ ಆರೋಪಿಯ ಗಂಡ **5-6** ವರ್ಷಗಳಿಂದ ಪರಿಚಯ. ಆರೋಪಿಯ ಗಂಡ ಸ್ವಲ್ಪ ಸ್ವಲ್ಪ ಹಣವನ್ನು ತೆಗೆದುಕೊಂಡು ವಾಪಸ್ಸು ಕೊಡುತ್ತಿದ್ದರು. ಆರೋಪಿಯ ಗಂಡನಿಗೆ **25-30** ಸಾವಿರ ರೂ. ಕೊಡುತ್ತಿದ್ದೇನು, ಅವರು ವಾಪಸ್ಸು ಹಿಂತಿರುಗಿಸುತ್ತಿದ್ದರು, ಈ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಆರೋಪಿಯ ಗಂಡ ಲೈನ್ ಮ್ಯಾನ್ ಅಗಿರುತ್ತಾರೆ. ಆರೋಪಿಯ ಗಂಡ ಮದ್ದೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಆರೋಪಿಯ ಗಂಡ ನನ್ನ ಬಳಿ ಹಣ ಕೇಳಿದಾಗ ಮದ್ದೂರಿನಲ್ಲಿ ಕೆಲಸ ಮಾಡುತ್ತಿದ್ದರು.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.**)**

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ